ಕಥೆ

# ಬಿಸಿಲಕೋಲು



**ಆನಂದ ಗೊಬ್ಬಿ**

ಕಲೆ: ವಿಶ್ವನಾಥ್ ಎ.ಎಸ್.

ಬ್ಯಾಸಿಗಿ ಮಧ್ಯಾಣದ ಹೊತ್ತಿನ್ಯಾಗ ಬಿಸಿಲು ಕಣ್ಣು ಕುಕ್ಕುವಂತೆ ರಾಚುತ್ತಿತ್ತು. ಕುಂಬಾರ ಸಿದ್ದಣ್ಣನ ಹೋಟಲದಾಗಿನ ಕರಿದೆಂಟು ಊರಾಗ ಬಲು ಫೇಮಸ್ಸಾಗಿದ್ದಕ್ಕ ಸುತ್ತಮುತ್ತಿನ ಊರಿನ ಜನರು ಸೈತ ಖಾಯಸ ಮಾಡಿ ಬಂದುಕೇಸಿ ಕುಂಡಿ ಹಚ್ಚಿ ಬಾಯಿ ಚಪ್ಪರಿಸುತ್ತಿದ್ದರು. ಬಹುತೇಕ ಊರಿನ ಹರೇದ ಮಂದಿ ಸೇರಿದಂತೆ ಮುದುಕ್ರು ಕರಿದೆಂಟು ತಿನ್ನುವ ನೆಪದಾಗ ಅಲ್ಲೆ ತಳ ಊರಿ ಹರಟೆ ಹೊಡ್ಕಂತ ಟೈಮ್ ಪಾಸ್ ಮಾಡ್ತಾರಂತ ತಿಳದು, ಪಟಕ್ಕನೆ ನೆನಪಾಗಿ ಕೈಲ್ಲಿದ್ದ ಕೆಲಸ ಬಿಟ್ಟುಕೇಸಿ ಅವನ ನೆನಸಿಕೆಂತ ಹೊರಾಗ ನಡದೆ. ಊರು ಒಳಗ ಓಡ್ಯಾಡದ್ದಾಗಲಿ, ಜನರಿದ್ದ ಕಡಿಗಿ ಹೋಗುವುದಾಗಲಿ ಭಾಳ ಕಡಿಮಿ. ಕೆಲಸ ಇದ್ದಾಗ ಓಡಾಡಿದ್ದು ಆದ. ಆಗ, 'ಈ ಬುಡ್ಡ ಯಾರ ಮಗ? ನಮ್ಮ ಚಂದ್ರಣ್ಣನ ಮಗ ಅನು, ಅಂತಾನೂ, 'ಮತ್ ಎಲ್ಲಿರ್ತಿದಿ ನೋಡಿಲ್ಲ ಅಲಾ?' ಅಂತಾನೂ ನನ್ನೂರಲ್ಲಿ ನನಗ ಕೇಳಿದ್ದು ಆದ. ಎದುರಿಗೆ ಬರ್ತಿದ್ದ ಮಂದಿನ ಓಳಾಗಿಕೆಂತ ದಾಟಿಕೆಂತ, ಹಿಂಜೆರಿಕೆಂತ ನಡದು ಹೋಟಲದ ಅಂಗಳದಾಗ ತೇಲಿಕಂಡೆ.

ಕಣ ಕಟ್ಟಿದಂತ ದೊಡ್ಡದಾದ ಹರೇದ ಗುಂಪು..! ಗಸ್ಸಕನ್ ನಿಂತು ನೋಡಿದೆ. ಇದ್ದಕ್ಕಿದ್ದಂತೆ ಉಸಿರಾಟ ನನ್ನಲ್ಲಿ ಹೆಚ್ಚಿಗಿಯಾದಂಗಾಯಿತು. ಮೆಲ್ಲಕ ನಿಂತಲ್ಲೆ ನಿಂತುಕೇಸಿ ಸಾವರಿಸಿಕೊಂಡೆ. ಅವನ ಗುಂಗಿನಲ್ಲಿಯೇ ಬಡಾನ ಬಡಾನ ಹೆಜ್ಜಿ ಹಾಕುತ್ತಿದ್ದವನಿಗೆ ಮಂದಿನ ಕಂಡ ಕಾಲುಗಳು ಸಲ್ಪ ಮಟ್ಟಿಗೆ ಗಕ್ಕನೆ ನಿಂತುಕೊಂಡವು. ಮೆಲ್ಲಕ ಸುಧಾರಿಸಿಕೊಂಡ ಕಾಲುಗಳು ಅವುರಾಳಗ ಅತಾತ ನಡೆದವು. ಹರೇದ ಗಂಡಸರೇ ಅಲ್ಲಿ ಸೇರಿಕೊಂಡು ಇಸ್ಪಟ್ಟಿನ ಎಲಿಯಾಗ ರಾಣಿನ ಹುಡ್ಕದ್ರಾಗ ಮುಣುಗಿದ್ದರು. ಕರ್‍ರ ಕರ್‍ರನ ಮಾರಿಗಳ ಮ್ಯಾಗ ಗೇಣುದ್ದ ಓತಿನ ಗಡ್ಡ ಬಿಟ್ಟಿದ್ದ ಹುಡುಗ್ರ ಮಾರಿ ನೋಡಕ್ಕ ಚೆಂದನಿಸುತ್ತಿತ್ತು. ಅವರ ಮಾರಿಗೆ ಮಾರಿ ಕೊಟ್ಟು ನಿಂದ್ರಲು ನನ್ನಿಂದ ಆಗಲಿಲ್ಲ. ಧೈರ್ಯಾನೂ ಬರಲಿಲ್ಲ. ಅವರಿಗೆ ಬೆನ್ನು ಮಾಡಿ ಹೋಟ್ಲಕ ಮುಖ ಮಾಡಿ ನಿಂತಕೊಂಡೆ. ಗುಂಪಿನಲ್ಲಿ ಒಂದೇ ಸವನೇ ಖಬಾಸುತ್ತಿದ್ದರು. ತಮ್ಮ ತಮ್ಮ ಗಮ್ಮತಿನ್ಯಾಗ ನಗಕತ್ತಿದ್ರು. 'ಅವ ಇಲ್ಲೆ ಅದಾನೇನು..? ಇದ್ರಾ ದನಿಯಾದ್ರು ಕೇಳ್ತಿತ್ತು..!' ಅನ್ಸತ್ತಿತ್ತು.

ಕೂನ ಸಿಗದೆ ಬೆವೂರಿನವನಂತೆ ಹೋಟಲದಾಗಿನ ಮಂದಿ ಮಾರಿ ನೋಡಿ ಕಣ್ಣು ಕಣ್ಣೇ ಬಿಟ್ಟರು. ಈ ಮೊದಲು ನಾನೆಂದು ಅಂತ ಜಾಗದಾಗ, ಗುಂಪಿನ್ಯಾಗ, ಮಂದ್ಯಾಗ ಕಂಡಿರಲಿಕ್ಕಿಲ್ಲ. ಹಸ್ಸನ ಬಟ್ಟಿ, ಎಣ್ಣೆಚ್ಚಿ ಬಾಚಿದ್ದ ತಲಿ ಕೂದಲು ಹಣಿಮ್ಯಾಗ ಮೂಡಿದ್ದ ವಿಭೂತಿ ಪಟ್ಟಿ ಅವರ ಕಣ್ಣೀಗೆ ಗುರಿಯಾಗಿರಬಹುದೆಂದು ಸಮಾಧಾನ ಮಾಡಿಕೊಂಡೆ. ಕೈ ಕಾಲುಗಳು ಸಣ್ಣಾಗಿ ನಡಗತ್ತಿದ್ದವು. ಹೋಟಲಿನ ಒಳಗೆ ಇಣುಕಿದ್ದೆ ಅವನಿರಲಿಲ್ಲ. ಹಿರಿ ವಯಸ್ಸಿನ ಮುದಿ ಗಂಡಸರು, ಇನ್ನಿಸು ಮಂದಿ ಚಾಹು ಕುಡೇರದಾಗ ಮುಣುಗಿದ್ದರು.

ಹೋಟಲ್ದಾತ ನನ್ನೋಡಿದವನೇ, 'ಬನ್ರೀ,